ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 5, November - December 2024, Pp. 101-104
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಜಿಲ್ಲೆಯ ಸಂಘ– ಸಂಸ್ಥೆಗಳು

**ಡಾ. ಕೃಷ್ಣಮೂರ್ತಿ ಸಿ. ಎಸ್.**
ಮುಖ್ಯಸ್ಥರು, ಇತಿಹಾಸ ವಿಭಾಗ, ಬಿ.ಎಲ್.ಡಿ.ಈ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ, ವಿಜಯಪುರ.

***Abstract:***
*ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಂಘ– ಸಂಸ್ಥೆಗಳು ಪ್ರಮುಖವಾಗಿ ಕಂಡುಬರುತ್ತವೆ. ಹಾಗೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಜಿಲ್ಲೆಯ ಸಂಘ– ಸಂಸ್ಥೆಗಳು ತಮ್ಮದೆಯಾದ ಸಿಂಹಪಾಲನ್ನು ಹೊಂದಿವೆ. ಹೀಗಾಗಿ ಹೋರಾಟದ ಮನೋಭಾವನೆಗಳನ್ನು ಬೆಳಸುವುದರ ಜೊತೆಗೆ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರಾಭಿಮಾನ, ರಾಷ್ಟ್ರೀಯವಾದದ ಪರಿಕಲ್ಪನೆ ಮೂಡಿಸುವುದು ಇವುಗಳ ಮೂಲ ಉದ್ದೇಶವಾಗಿರುವುದು ಗಮನಾರ್ಹವಾಗಿವೆ. ಆದ್ದರಿಂದ ದಾವಣಗೆರೆ ಜಿಲ್ಲೆಯಲ್ಲಿಯು ಅಂತಹ ಸಂಘ–ಸಂಸ್ಥೆಗಳ ಬಗ್ಗೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ದಾವಣಗೆರೆ, ಸ್ವಾತಂತ್ರ್ಯ ಹೋರಾಟ, ಸಂಘ–ಸಂಸ್ಥೆಗಳ ಪಾತ್ರ.*

## ಪೀಠಿಕೆ

ಶ್ರೀ ಹರ್ಡೇಕರ್ ಮಂಜಪ್ಪನವರು 1905ರಲ್ಲಿ ದಾವಣಗೆರೆಯಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿ 1906ರಲ್ಲಿ "ಧನುರ್ಧಾರಿ" ಪತ್ರಿಕೆಯನ್ನು ಪ್ರಾರಂಭಿಸಿ, 1920ರಲ್ಲಿ ಭಾರತದಲ್ಲಿ ಗಾಂಧೀಜಿಯವರ ಪ್ರಭಾವದಿಂದ ರಾಷ್ಟ್ರಮಟ್ಟದಲ್ಲಿ ಉರುಪಿನ ಚಳವಳಿಗಳ ಆರಂಭಗೊಂಡರೇ ದಾವಣಗೆರೆಯಲ್ಲಿ ಹರ್ಡೇಕರ್ ಮಂಜಪ್ಪನವರು ಯುವಕರನ್ನು ಪ್ರೇರಣೆಗೊಳ್ಳಸುತ್ತಾ 1920ರ ವೇಳೆಗಾಗಲೆ ಶ್ರೀ ಬಸವೇಶ್ವರ ಯುವಕರ ಸೇವಾದಳ ಎಂಬ ಒಂದು ಸಂಘವನ್ನು ನಿರ್ಮಾಣ ಮಾಡಿದರು.[1] ಇದರಿಂದ ಸ್ವಾತಂತ್ರ್ಯ ಯೋಧರಿಗೆ ತರಬೇತಿಯನ್ನು ನೀಡುತ್ತಿದ್ದರು. ನಂತರ 1923 ರಲ್ಲಿ ಹರಿಹರದ ತುಂಗಭದ್ರ ನದಿ ತೀರದಲ್ಲಿ ಹರ್ಡೇಕರ್ ಮಂಜಪ್ಪನವರು ಆಶ್ರಮವನ್ನು ಸ್ಥಾಪಿಸಿ ಸ್ವಾತಂತ್ರ್ಯ ಯೋಧರ ಶಿಬಿರವನ್ನು ನಡೆಸಿ ತರಬೇತಿ ನೀಡಿದರು.[2] 1924ರಲ್ಲಿಯ ಐತಿಹಾಸಿಕ ಅಧಿವೇಶನವಾದ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀ ಬಸವೇಶ್ವರ ಸೇವಾದಳ ಜೊತೆಗೆ ಭಾಗವಹಿಸಿ ಅಧಿವೇಶನದ ಶಿಸ್ತು ಮತ್ತು ಸಮಯ ಪ್ರಜ್ಞೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದರು. 1930ರಲ್ಲಿ ಹಾವೇರಿಯಲ್ಲಿದೆ ಸೇವಾದಳದಿಂದ ವೀರಶೈವ ಪರಿಷತ್ತಿನ ಸಮ್ಮೇಳನದಲ್ಲಿ ಹರ್ಡೇಕರ್ ಮಂಜಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.[3] 1933 ರಲ್ಲಿಕೊಟ್ಟೂರಿನ ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶಿಬಿರವನ್ನು ಹರ್ಡೇಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು.[4] ಹೀಗೆ ಸ್ವಾತಂತ್ರ್ಯ ಯೋಧರಿಗೆ ಪ್ರೇರಣೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿತು.

***Please cite this article as:*** ಕೃಷ್ಣಮೂರ್ತಿ ಸಿ. ಎಸ್. (2024). ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಜಿಲ್ಲೆಯ ಸಂಘ– ಸಂಸ್ಥೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(5), 101–104

**ತಿಲಕ್ ಸಂಘ**

ಸ್ವಾತಂತ್ರ್ಯದ ಕಹಳೆಯ ಕೂಗು ಆರಂಭವಾದದ್ದು 'ತಿಲಕ ಸಂಘ' ಎನ್ನುವಒಂದು ಸಂಘದಿಂದ. ಹರಿಹರ ಗುಂಡೂರಾಯರೆಂಬ ಉತ್ಸಾಹಿಗಳೊಬ್ಬರು ವಿದ್ಯಾರ್ಥಿಯಾದಾಗಿನಿಂದಲೂ ತಿಲಕರ ಲೇಖನ, ಭಾಷಣಗಳಿಂದ ಮತ್ತು ಮಾತುಗಳಿಂದ (The Aim of the Indian people should be the attainment of Swaraj. Tilak Declared, "Swaraj is my birth right and I shall have it") ಹಾಗೂ ತಿಲಕರ ಪತ್ರಿಕೆಗಳಿಂದ ಪ್ರಭಾವಿತರಾಗಿ 1920 ರಲ್ಲಿ ಹರಿಹರದಲ್ಲಿ 'ತಿಲಕ ಸಂಘ'ವನ್ನು ಸ್ಥಾಪಿಸಿ[5] ಜಿಲ್ಲಾ ಕೇಂದ್ರವಾದ ಚಿತ್ರದುರ್ಗದ ಅಯ್ಯಣ್ಣನ ಪೇಟೆಗೆ ಸ್ಥಳಾಂತರಿಸಿದರು. ಈ ಸಂಘದ ಉದ್ದೇಶ ಜನರಲ್ಲಿ ರಾಷ್ಟ್ರೀಯತೆ ಹಾಗೂ ದೇಶಭಕ್ತಿಯನ್ನು ಮೂಡಿಸುವುದು ಮತ್ತು ಕ್ರಾಂತಿಕಾರಿ ಹೋರಾಟ ಮಾಡಲು ಪ್ರೇರಣೆ ನೀಡುವುದಾಗಿತ್ತು. ಆದ್ದರಿಂದ ಈ ಸಂಘವು ಪುಸ್ತಕಾಲಯ ಮತ್ತು ವಾಚನಾಲಯವೊಂದನ್ನು ಸ್ಥಾಪಿಸಿ, ವೃತ್ತಪತ್ರಿಕೆಗಳನ್ನು ತರಿಸಿ ಓದುವ ಹವ್ಯಾಸವನ್ನು ಜನರಲ್ಲಿ ಮೂಡಿಸುವುದು. ಸಾರ್ವಜನಿಕ ಸಭೆಗಳನ್ನು ನಡೆಸುವುದು, ದೇಶದ ನಾನಾ ಭಾಗಗಳಿಂದ ಪ್ರಸಿದ್ಧ ಹೋರಾಟಗಾರರನ್ನು ಕರೆಸಿ ಕ್ರಾಂತಿಕಾರಿಕ ಭಾಷಣವನ್ನು ಮಾಡಿಸುವುದು, ಖಾದಿ ಪ್ರಚಾರ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿತ್ತು. ಈ ಸಂಘವು ಎಂ.ವೆಂಕಟಕೃಷ್ಣಯ್ಯ, ಆಲೂರು ವೆಂಕಟರಾಯರು, ಡಿ. ಕೆ.ಭಾರದ್ವಾಜ್, ಡಾ.ಎನ್. ಎಸ್. ಹರ್ಡೇಕರ್, ಮುದವೀಡು ಕೃಷ್ಣರಾಯರು ಮುಂತಾದವರನ್ನು ಕರೆಸಿ ಭಾಷಣಗಳನ್ನು ಮಾಡಿಸಿ ಜನರನ್ನು ಜಾಗೃತಿಗೊಳಿಸಲಾಯಿತು.

ಆ ಸಮಯದಲ್ಲಿ ಸ್ವದೇಶಿ ವಸ್ತುಗಳ ಬಳಕೆ, ಖಾದಿ ವಸ್ತುಗಳ ಬಳಕೆ, ಮತ್ತು ಹರಿಕಥೆ, ಪೌರಾಣಿಕ ಕಥೆಗಳನ್ನು, ಗಣಪತಿ ಉತ್ಸವಗಳನ್ನೂ, ಲಾವಣಿಗಳನ್ನೂ ಕೂಡಾ ಸ್ವಾತಂತ್ರ್ಯಾಂದೋಲನದ ಪ್ರಚಾರ ಮಾಧ್ಯಮಗಳನ್ನಾಗಿಸಿಕೊಂಡರು.ಹೀಗೆ ತಿಲಕ ಸಂಘವು ಸ್ವಾತಂತ್ರ್ಯ ಆಂದೋಲನದ ಕಿಡಿಗಳನ್ನು ಎಬ್ಬಿಸುವುದರಲ್ಲಿ ಪ್ರಮುಖ ಪಾತ್ರವಹಿಸಿತು.

**ಪ್ರಾಣಿದಯಾ ಸಂಘ:**

1922ರ ವೇಳೆಗೆ ದಾವಣಗೆರೆಯಲ್ಲಿ ಪ್ರಾಣಿದಯಾ ಸಂಘವನ್ನು ಶ್ರೀ ಕಾಸಲ ಶ್ರೀನಿವಾಸ ಶೆಟ್ಟರು, ಹರ್ಡೇಕರ್ ಮಂಜಪ್ಪ, ಗಾಯಕವಾಡ ನಾರಾಯಣ ಇನ್ನೂ ಅನೇಕರು ಸೇರಿ ಸ್ಥಾಪಿಸಿದರು.[6] ಪ್ರಾಣಿ ಬಲಿ ಅಥವಾ ಜಾತ್ರೆ ಮಾಡುವ ನೆಪದಲ್ಲಿ ದೇವರಿಗೆ ಪ್ರಾಣಿ ಬಲಿ ನೀಡುವುದನ್ನು ಖಂಡಿಸಿದರು.

**ಪ್ರಾಣಿ ದಯಾಸಂಘದ ಕಾರ್ಯಗಳು**

ಅಂದಿನ ದಾವಣಗೆರೆ ನಗರದಲ್ಲಿ ಸಂಚರಿಸಿ ಪ್ರಾಣಿ ಬಲಿ ನೀಡುವುದನ್ನು ಬಹಿಷ್ಕಾರ ಮಾಡಲು ನಗರದ ಜನತೆಯ ಜೊತೆಯಲ್ಲಿ ಚರ್ಚೆ ನಡೆಸಿ ಸಾರ್ವಜನಿಕ ಸಭೆ ನಡೆಸುವುದು ಮುಖ್ಯ ಉದ್ದೇಶವಾಗಿತ್ತು. ಪ್ರಾಣಿಗಳು ಕೂಡ ಜೀವಿಗಳು ಅವುಗಳಿಗೂ ಜೀವಿಸುವ ಹಕ್ಕಿದೆ ಎಂದು ಸಂರಕ್ಷಣೆ ನೀಡವುದು ಈ ಸಂಘದ ಮುಖ್ಯಉದ್ದೇಶವಾಗಿತ್ತು, ಗೋಮಾತೆಗಳು ನಮ್ಮ ನಾಡಿನ ಪುಣ್ಯ ಕೋಟಿಗಳು ಅವುಗಳ ಹತ್ಯೆ ಮಹಾಪಾಪ, ಮುಕ್ಕೋಟಿ ದೇವತೆಗಳು ಒಂದು ಗೋಮಾತೆಗೆ ಸಮ ಆಗಿರುತ್ತದೆ. ಅಂತಹ ಗೋವುಗಳನ್ನು ಕಸಾಯಿ ಖಾನೆಗೆ ಹೋಗುವುದನ್ನು ಸಂಕ್ಷಿಸುವುದು, ಕಸಾಯಿ ಖಾನೆಗಳಿಂದ ತಂದ ಗೋವುಗಳನ್ನ ಮತ್ತು ವಯಸ್ಸಾದ ಗೋವುಗಳನ್ನು ಸಂರಕ್ಷಣೆ ಮಾಡಲು ಗೋಶಾಲೆಗಳನ್ನು ಸ್ಥಾಪಿಸುವುದು ಮುಖ್ಯಉದ್ದೇಶವಾಗಿತ್ತು, ಇದಲ್ಲದೆ ಗೋವುಗಳನ್ನು ಸಾಮಾಜದಲ್ಲಿ ಪೂಜ್ಯ ಭಾವನೆಯಿಂದ ಕಾಣುವಂತೆ ಪ್ರಚಾರ ಕೈಗೊಳ್ಳುವುದು ಮುಖ್ಯ ಉದ್ದೇಶವಾಗಿತ್ತು. ಗೋವುಗಳ ಮಾನಸಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿ ಹಿಂದೂ ಧರ್ಮದ ಐಕ್ಯತೆಯನ್ನು ಮೆರೆಯಲು, ರಾಷ್ಟ್ರೀಯ ಭಾವನೆಗಳನ್ನು ಪ್ರಚಾರ ಪಡಿಸುವುದು, ಮತ್ತು ಗೋಮಾತೆಯ ರಕ್ಷಿಸಲು ಬೀದಿನಾಟಕಗಳನ್ನು ಏರ್ಪಡಿಸುವುದು. ರಾಷ್ಟ್ರೀಯ ಜಾಗೃತಿಯನ್ನು

ಮೂಡಿಸಿ, ರಾಷ್ಟ್ರಾಭಿಮಾನ ಬೆಳಸುವುದು. ಈ ಸಂಘದ ಮುಖ್ಯ ಉದ್ದೇಶವಾಗಿತ್ತು. ಮುಂದೆ ಗೋಶಾಲೆ ಪ್ರಾರಂಭಿಸುವುದರ ಮುಖೇನ ದಾವಣಗೆರೆಯಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

**ಹರಿಜನ ಸೇವಕ ಸಂಘ:**

ಅಖಂಡ ಭಾರತದಲ್ಲಿ 1932 ರ ಸೆಪ್ಟಂಬರ್ 28ರಂದು **"**ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘವು**"** ಅಸ್ತಿತ್ವಕ್ಕೆ ಬಂದಿತು.[7] ಸಂಘದ ಹೆಸರು ಗಾಂಧೀಜಿ ಅವರಿಗೆ ಹಿಡಿಸಲಿಲ್ಲವಾದ್ದರಿಂದ'1932ರ ಡಿಸೆಂಬರ್‌ನಲ್ಲಿ ಅಸ್ಪೃಶ್ಯ ಸಮಾಜ ಸೇವಕರು' ಎಂಬ ಹೊಸ ಹೆಸರನ್ನು ಇಡಲಾಯಿತು. ಈ ಹೆಸರೂ ಗಾಂಧೀಜಿ ಅವರು ಬಯಸಿದಷ್ಟು ಚೆನ್ನಾಗಿರಲಿಲ್ಲ ಮತ್ತೆ ಹೆಸರನ್ನು ಬದಲಾಯಿಸಿ **'ಹರಿಜನ ಸೇವಕ ಸಂಘ'** ಎಂದು ಹೆಸರಿಟ್ಟರು.[8] ಹರಿಜನರ ಉದ್ಧಾರಕ್ಕಾಗಿ ಹರಿಜನ ಸೇವಕ ಸಂಘದ ಸಮಿತಿಗಳನ್ನು ಪ್ರಾಂತೀಯ ಮಂಡಳಿಗಳು ಮತ್ತು ಜಿಲ್ಲಾ ಹಾಗೂ ಸ್ಥಾನೀಯ ಸಮಿತಿಗಳನ್ನು ಮಾಡಲಾಯಿತು. ಅದರಂತೆ ದಾವಣಗೆರೆಯಲ್ಲಿಯೂ ಈ ಸಂಘವನ್ನು ಸ್ಥಾಪಿಸಲಾಯಿತು. ಇದರ ಕಾರ್ಯಸಮಿತಿಯಲ್ಲಿ ಆರ್. ಜಿ. ಸಿದ್ದಪ್ಪ – ಅಧ್ಯಕ್ಷರು, ಮಾಗನೂರು ಬಸಪ್ಪ – ಕೋಶಾಧ್ಯಕ್ಷರು, ಕೆ. ಎಸ್. ಸಿದ್ದಪ್ಪ – ಕಾರ್ಯದರ್ಶಿಗಳು, ಕಾಸಲ್‌ಅನಂತ ಶ್ರೇಷ್ಠಿ –ಸದಸ್ಯರು, ಲಕ್ಷ್ಮಪ್ಪ – ಸದಸ್ಯರು ಹಾಗೂ ಗಾಯಕವಾಡ ನಾರಾಯಣ – ಸದಸ್ಯರಾಗಿದ್ದರು.

**ಹರಿಜನ ಸೇವಕ ಸಂಘದ ಕಾರ್ಯಗಳು:**

ಅಂದಿನ ಕಾಂಗ್ರೆಸ್ ಸರ್ಕಾರದ ಜೊತೆಯಲ್ಲಿ ಚರ್ಚೆ ನಡೆಸಿ ಸಾರ್ವಜನಿಕ ಬಾವಿಗಳನ್ನು ಸ್ಥಾಪಿಸುವುದು ಮುಖ್ಯಉದ್ದೇಶವಾಗಿತ್ತು. ಕೇಂದ್ರದಲ್ಲಿ ಮತ್ತು ಪ್ರಾಂತ್ಯಗಳಲ್ಲಿ ರಾಜಕೀಯ ಮೀಸಲಾತಿಯನ್ನು ನೀಡಲು ಪ್ರಯತ್ನಿಸಲಾಗಿತ್ತು. ರಾಷ್ಟ್ರೀಯ ಶಾಲೆಗಳನ್ನು ಸಂಘಟಿಸುವುದು, ಹರಿಜನರ ಸಾಮಾಜಿಕ, ಮಾನಸಿಕ ಮತ್ತು ನೈತಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು, ಹರಿಜನರು ತಮ್ಮ ಮಕ್ಕಳನ್ನು ರಾಷ್ಟ್ರೀಯ ಶಾಲೆಗಳಿಗೆ ಕಳುಹಿಸುವಂತೆ ಪ್ರೋತ್ಸಾಹಿಸಿ, ಬೇರೆಯವರು ಅನುಭವಿಸುವ ಎಲ್ಲಾ ಸೌಲಭ್ಯಗಳನ್ನು ಇವರೂ ಅನುಭವಿಸುವಂತೆ ವ್ಯವಸ್ಥೆ ಮಾಡುವುದು ಇದರ ಉದ್ದೇಶವಾಗಿತ್ತು. ಇದಲ್ಲದೆ ಹರಿಜನ ವಸತಿ ಮತ್ತು ಗ್ರಾಮೋದ್ಯೋಗ ಪ್ರಾರಂಭ ಮತ್ತು ಹರಿಜನ ವಿದ್ಯಾರ್ಥಿ ನಿಲಯಗಳ ಸ್ಥಾಪನೆಯೂ ಕೂಡ ಸಂಘದ ಉದ್ದೇಶವಾಗಿತ್ತು.

**ತರುಣತಿಲಕ್ ಸಂಘ**

ಶ್ರೀ ಬಿ.ಮಲ್ಲಪ್ಪನವರು ಅಧ್ಯಕ್ಷರಾಗಿ, ವೀರಬಸಯ್ಯ ಪುರಾಣಿಕ ಮಠರವರು ಕಾರ್ಯದರ್ಶಿಗಳಾಗಿ[9] 1938 ರಲ್ಲಿ ತರುಣತಿಲಕ್ ಸಂಘವನ್ನು ಸ್ಥಾಪಿಸಿದರು. ಶ್ರೀಯುತರ ಜೊತೆಗೆ ಕೆ.ಟಿ. ಜಂಬಣ್ಣ, ಬೊಂದಾಡೆ ಹನುಮಂತಪ್ಪ ಇನ್ನೂ ಅನೇಕ ಯುವಕರೇ ಸೇರಿಕೊಂಡು ಈ ಸಂಘದ ಕಾರ್ಯಚಟುವಟಿಕೆಯನ್ನು ರೂಪಿಸುತ್ತಿದ್ದರು.

**ತರುಣತಿಲಕ್ ಸಂಘದ ಕಾರ್ಯಗಳು:**

ಯುವಕರನ್ನು ಗುಂಪುಗೂಡಿಸಿ ಸಂಘಟನೆ ಮಾಡುವುದು, ರಾಷ್ಟ್ರಾಭಿಮಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು, ಸಾರಾಯಿ ಅಂಗಡಿಗಳ ಧ್ವಂಸ, ವಿದೇಶಿ ವಸ್ತುಗಳನ್ನು ಸುಟ್ಟು ಹಾಕುವುದು, ರಸ್ತೆ ಮತ್ತು ಸೇತುವೆಗಳನ್ನು ನಾಶ ಪಡಿಸುವುದು, ರೈಲುತಡೆ ನಡೆಸುವುದು ಮತ್ತುರೈಲು ಹಳಿಗಳನ್ನು ಕೀಳುವುದು, ಪೊಲೀಸ್ ಠಾಣೆಗಳ ಮತ್ತು ಸರ್ಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ ನಡೆಸುವುದು, ಆಚಾರ, ವಿಚಾರ, ರೂಢಿಸಂಪ್ರದಾಯ, ಪೌರಾಣಿಕ ನಾಟಕಗಳನ್ನು ಆಡಿಸುವುದು (ಉದಾ: ಕಲ್ಯಾಣಕ್ರಾಂತಿ, ಅಕ್ಕಮಹಾದೇವಿ, ಚಾಲ್ತಿ ದುನಿಯಾ, ಖಾದಿಸೀರೆ), ಪ್ರಮುಖಕಾಂಗ್ರೆಸ್ ನಾಯಕರನ್ನು ನಗರಕ್ಕೆ ಕರೆತಂದು ಅವರಿಂದ ತರಬೇತಿ, ಭಾಷಣಗಳು, ರಾಷ್ಟ್ರೀಯತೆಯ ಬಗ್ಗೆ ತಿಳಿಸುವುದು, 1941ರ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂ ಸೇವಕರಾಗಿ ಭಾಗವಹಿಸಿ ಯಶಸ್ವಿಗೊಳ್ಳಿಸಿದರು. ಈ ಕಾರ್ಯ ಚಟುವಟಿಕೆಗಳು ಈ ಸಂಘದ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲಾ

ಉದ್ದೇಶಗಳಿಂದ ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

**ಸುಭಾಷ್‌ಚಂದ್ರಬೋಸ್ ಸಂಘ ಸ್ಥಾಪನೆ**

ಸುಭಾಷ್ ಚಂದ್ರ ಬೋಸ್‌ರವರ ಪರಮ ಗುರಿಯಾದ "freedom is the song of my soul" (ಸ್ವಾತಂತ್ರ್ಯವೇ ನನ್ನೆದೆಯ ಹಾಡು) "give me blood I will regain your freedom back to you" (ನನಗೆ ರಕ್ತಕೋಡಿ, ನಿಮ್ಮ ನಾನು ಸ್ವಾತಂತ್ರ್ಯ ಕೋಡಿಸುತ್ತೇನೆ) ಎಂಬ ಘೋಷಣೆಯಂತೆ, ಸುಭಾಷರು ಭಾರತದಲ್ಲಿ ತಮ್ಮ ಪ್ರಭಾವವನ್ನು ಬೀರಿ ಅನೇಕ ಯುವಕರನ್ನು ತಮ್ಮತ್ತ ಗಮನ ಸೆಳೆದಿದ್ದರು. ಅದೇ ರೀತಿಯಲ್ಲಿ 1939ರಲ್ಲಿ ಕರ್ನಾಟಕದ ಹಾವೇರಿ ಜಿಲ್ಲೆಗೆ ಕೆ.ಎಪ್. ಪಟೇಲ್, ಮೈಲಾರ ಮಹಾದೇವಪ್ಪ, ಮೆಣಸಿನಹಾಳು ತಿಮ್ಮನಗೌಡರು, ಸಂಗೂರು ಕರಿಯಪ್ಪ ಇವರ ಮಾತಿಗೆ ಒಗೊಟ್ಟು ಹಾವೇರಿ ಜಿಲ್ಲೆಯ ಬ್ಯಾಡಗಿ ನಗರಕ್ಕೆ ಪೆಬ್ರವರಿ 1, 1939ರಲ್ಲಿ ಆಗಮಿಸಿದ[10] ಸಂದರ್ಭದಲ್ಲಿ ಆ ಭಾಗದ ಅನೇಕ ಯುವಕರ ಗುಂಪುಗಳು ಅವರನ್ನು ಭೇಟಿಮಾಡಿದರು. ನಂತರ ಸಂಜೆಯ ವೇಳೆಗೆ ರಾಣೆಬೆನ್ನೂರಿಗೆ ಬಂದ ಸಂದರ್ಭದಲ್ಲಿ ಎನ್.ಎಂ.ಚಂದ್ರಶೇಖರಯ್ಯನವರು. ಮೆಣಸಿನಹಾಳ ತಿಮ್ಮನಗೌಡರು ಮತ್ತು ಕೆ.ಎಫ್.ಪಟೇಲರ ಜೊತೆಯಲ್ಲಿ ಸುಭಾಷ್ ಚಂದ್ರಬೋಸ್ ರವರನ್ನು ಭೇಟಿ ಮಾಡಿ ಅವರ ಮಾತುಗಳಿಂದ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ 31 ಯುವಕರ ಗುಂಪು ಕಟ್ಟಿ ಸುಭಾಷ್ ಚಂದ್ರಬೋಸ್ ಸಂಘವನ್ನು ಸ್ಥಾಪಿಸಿದರು.[11]

**ಸುಭಾಷ್‌ಚಂದ್ರ ಬೋಸ್ ಸಂಘದ ಉದ್ದೇಶಗಳು:**

ರಾಷ್ಟ್ರಾಭಿಮಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು, ಸಾರಾಯಿ ಅಂಗಡಿಗಳ ಧ್ವಂಸ, ಅಂಚೆ ಕಛೇರಿಗಳ ಮತ್ತು ಅಂಚೆ ಪೆಟ್ಟಿಗೆಗಳ ನಾಶ, ರಸ್ತೆ ಮತ್ತು ಸೇತುವೆಗಳನ್ನು ನಾಶ ಪಡಿಸುವುದು, ರೈಲುತಡೆ ನಡೆಸುವುದು ಮತ್ತುರೈಲು ಹಳಿಗಳನ್ನು ಕೀಳುವುದು, ಪೊಲೀಸ್‌ಠಾಣೆಗೆ ಮತ್ತುಗೆ ಹಾಕಿ ಬಂದೂಕುಗಳನ್ನು ವಶಪಡಿಸಿಕೊಳ್ಳುವುದು, ವಿದೇಶಿ ವಸ್ತುಗಳನ್ನು ಸುಟ್ಟು ಹಾಕುವುದು ಹಾಗೂ ಸರ್ಕಾರಿ ಕಛೇರಿಗಳ ಮೇಲೆ ಧ್ವಜವನ್ನು ಹಾರಿಸುವುದು.[12] ಈ ಸಂಘದ ಪ್ರಮುಖಉದ್ದೇಶವಾಗಿತ್ತು.

ಹೀಗೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಜಿಲ್ಲೆಯು ದೇಶದ ದಾಸ್ಯವನ್ನು ಬಿಡಿಸುವಲ್ಲಿ ಪ್ರಮುಖವಾಗಿದೆ.

**ಕೊನೆಟಿಪ್ಪಣಿಗಳು**


1. ವಕ್ತೃ: ಅಂಬಕ್ಕ ತಳವಾರ ಕೋಂ ಭೀಮಪ್ಪ, ಸಂದರ್ಶನ, ದಿನಾಂಕ: 12–02–2013.
2. ಬಳ್ಳೇಕೆರೆ ಹನುಮಂತಪ್ಪ, ಹರಿಹರ ತಾಲೂಕಾ ದರ್ಶಿನಿ, ಪುಟ.ಸಂ. 21.
3. ಪ್ರಜಾವಾಣಿ, ದಿನಪತ್ರಿಕೆ, ದಿನಾಂಕ: 22–06–2010.
4. ವಕ್ತೃ: ವೀರಭದ್ರಯ್ಯ ಹೀರೆಮಠ, ಸಂದರ್ಶನ, ದಿನಾಂಕ: 05–08–2014.
5. ವಕ್ತೃ: ಚಂದ್ರಶೇಖರಯ್ಯ ಎನ್.ಎಂ. ರವರು, ಸಂದರ್ಶನ, ದಿನಾಂಕ: 04–03–2012.
6. ವಕ್ತೃ: ನಾಯಕ, ಎಂ.ವಿ., ಸಂದರ್ಶನ, ದಿನಾಂಕ: 27–04–2012.
7. ವಕ್ತೃ: ಶ್ರೀ ಕಾಸಲ ರತ್ನಮ್ಮ, ಸಂದರ್ಶನ, ದಿನಾಂಕ: 26–09–2014.
8. ಡಾ. ಬಿ.ಆರ್.ಅಂಬೇಡ್ಕರ್, ಸಮಗ್ರಬರಹಗಳು ಮತ್ತು ಭಾಷಣಗಳು ಸಂ:5. ಪು,ಸಂ:367.
9. ಅದೇ, ಪುಟ,ಸಂ. 362.
10. ಸೂರ್ಯನಾಥಕಾಮತ್. *ಸ್ವಾತಂತ್ರ್ಯ ಹೋರಾಟದ ಸ್ಮೃತಿಗಳು(ಸಂ–02).* ಪುಟ. 568.
11. ರೇಣುಕಾಎಸ್. ಸಂಕನ ಗೌಡ್ರು, *ಕೆ.ಎಫ್. ಪಾಟೀಲ್ ಬದುಕು– ಬರಹ.* ಪುಟ. 105.
12. ನ್ಯಾಷನಲ್ ಯುಥ್ ಲೀಗ್ (ದಿ: 24/04/1935 – 16/06/1937) ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು.